## 1

**ಕಾ**ನೂನಿನ ನಿಯಮದಂತೆ ಅದು ಆಗಬೇಕಿತ್ತು. ಪತ್ರಿಕೆಯೋರು ಒಂದು ಮೂಲೆಯಲ್ಲಿ ಹಾಕಿರ್ತಾರೆ, ಅದನ್ನೆಲ್ಲ ಯಾರು ಓದುತ್ತಾರೆ? ಅಷ್ಟಕ್ಕೂ ಅಷ್ಟೆಲ್ಲಾ ಸಮಯ, ತಾಳ್ಮೆ ಈಗೆಲ್ಲ ಯಾರಿಗಿರ್ತದೆ? ಅಂದಿದ್ದಳು ಸ್ನೇಹಿತೆ. ಹಾಗಂತ ಒಳ ಉದ್ದೇಶದ ಬಗ್ಗೆ ಅವಳಿಗೂ ಎಷ್ಟು ಬೇಕೋ ಅಷ್ಟೇ ತಿಳಿಸಿದ್ದಳು. ಆದರೆ, ಎರಡೇ ದಿನದಲ್ಲಿ ಮನೆಯವರಿಗೆಲ್ಲ ಅದು ಹೇಗೋ ಗೊತ್ತಾಗಿಬಿಟ್ಟಿತು. ರಮಾಳ ಪುಸ್ತಕ ತಿರುಗಿಕೊಟ್ಟು ಹರಟೆ ಮುಗಿಸಿ ಮನೆಗೆ ಬಂದು ಹೊಸ್ತಿಲು ದಾಟುತ್ತಿದ್ದಂತೆ ಅಜ್ಜಿ ಪೇಪರು ಸಮೇತ ಕಾಯುತ್ತಿದ್ದಳು. ಎರಡನೇ ಕ್ಲಾಸುವರೆಗೆ ಓದಿ, ಈಗ ಕಣ್ಣು ಮಂಜಾಗಿರುವ ಕೆಂಪಮ್ಮ, ಪೆನ್ನಿನಲ್ಲಿ ನೀಲಿ ಚೌಕಟ್ಟು ಮಾಡಿಸಿಟ್ಟುಕೊಂಡ ಚಿಕ್ಕ ಪ್ರಕಟಣೆಯನ್ನು ಬೆರಳಿಂದ ತಟ್ಟುತ್ತ 'ಇದು... ನಿನ್ನದಲ್ವೇನೇ?' ಅಂತ ಪ್ರತಿವಾದಿ ಕಡೆಯ ವಕೀಲಳಂತೆ ಏಕಾಏಕಿ ಎದುರು ಬಂದು ಅಡ್ಡಗಟ್ಟಿದ್ದಕ್ಕೆ, 'ಏನಜ್ಜಿ?...' ಅಂದಳು ಎಲ್ಲಾ ಗೊತ್ತಿದ್ದೂ. ಅದು ತಾನು ಕೊಟ್ಟಿದ್ದೇ. '...ತಿಳಿಸುವುದೇನೆಂದರೆ... ವಿಳಾಸದವಳಾದ, ಸುಬ್ಬಿ ಎನ್ನುವ ಹೆಸರಿನವಳಾದ ನಾನು, ನನ್ನ ಹೆಸರನ್ನು ಈ ತಾರೀಕಿನಿಂದ ಎಲ್ಲಾ ಕಾರಣಕ್ಕೂ ಸುರಭಿ ಅಂತಾ ಬದಲಾಯಿಸಿಕೊಂಡಿರುತ್ತೇನೆ...' ಇತ್ಯಾದಿ. ಮನೆಯವರಿಗ್ಯಾರಿಗೂ ಸಮಯವಿಲ್ಲ; ಓದುವ ಹವ್ಯಾಸವೂ ಇಲ್ಲ. ಇದೆಲ್ಲ ಸಾರ್ವಜನಿಕ ವಾಚನಾಲಯದಲ್ಲಿ ಬೆಳಗಿಂದ ಅದರ ಬಾಗಿಲು ಮುಚ್ಚುವವರೆಗು ಕುಳಿತಿದ್ದು ಒಂದೊಂದು ಪೇಪರಿನ ಒಂದಕ್ಷರ ಬಿಡದೆ ಓದಿ ಕಾಲಹರಣ ಮಾಡೋ ಚಟ ಬೆಳೆಸಿಕೊಂಡಿರುವ ಪಕ್ಕದ ಮನೆ ಕುಳ್ಳಬಸಣ್ಣನ ಕೆಲಸವೇ ಇರಬೇಕು. ತನ್ನ ಗ್ರಹಚಾರ! ಅದೂ ಒಂದು ಲೆಕ್ಕದಲ್ಲಿ ಒಳ್ಳೆಯದೇ ಆಯ್ತು ಅಂದುಕೊಂಡು 'ಹೌದಜ್ಜೀ... ನಾನೇ' ಅಂದಳು ದಾರಿಬಿಡು ಅನ್ನುವಂತೆ.

'ಅಯ್ಯಯ್ಯೋ! ನಿಂಗೇನು ಬಂತೇ! ನಿನ್ನಮ್ಮ ಬಸಿರಿಯಿದ್ದಾಗ ಎರಡೆರಡು ಸಾರಿ ನಾಗ್ರಹಾವು ಮನೆಯೊಳಗೆ ಬಂತು. ಮೇಲಿಂದ ಆಗಾಗ ಸ್ವಪ್ನದಲ್ಲಿ ಬರೋದು. ಸುಬ್ರಮಣ್ಯಸ್ವಾಮೀಗೆ ಕಾಣ್ಕೆ ತೆಗೆದಿಟ್ಟು ಗಂಡಾದ್ರೆ ಸುಬ್ಬು, ಹೆಣ್ಣಾದ್ರೆ ಸುಬ್ಬಿ ಅಂತ ಅವನ ಹೆಸರಿಡತೀವಿ ಅಂತಾ ಹರಕೆ ಹೊತ್ಕೊಂಡಿದ್ಕೆ ಸ್ವಾಮಿ ಪ್ರಸನ್ನಾಗಿ ಆಮೇಲೆ ಕಾಣಿಸಲಿಲ್ಲ. ಅವನ ಹೆಸ್ರನ್ನೆ ನಿಂಗಿಟ್ಟಿದ್ದು. ಅದನ್ನ ಕಸದ ಥರಾ ಬಿಸಾಕಿ ಸುರಬಿನೊ ಶಬರಿನೊ ಅಂತಾ ಇಟ್ಕೊಂಡು ಸಾಲ್ದೇ ಪೇಪರ್ನಲ್ಲೂ ಟಾಂ ಟಾಂ ಮಾಡ್ಕೊಂಡಿದಿಯಲ್ಲೇ. ನೀನೇನು ಮಂತ್ರೀನಾ ಅಲ್ಲಾ ಸಿನಿಮಾ ನಟೀನಾ?...' ಒಂದುಕ್ಷಣ ಬೆಚ್ಚಿ ಅಜ್ಜಿಯ ಮುಖ ನೋಡಿದಳು. ಮುಂದುವರಿದ ವಟವಟದಲ್ಲಿ ದೇವರಿಗಾದ ಅಪಚಾರದ ವಿವರಣೆಯೇ ಉದುರುತ್ತಿದ್ದಂತೆ ಪಕ್ಕದಲ್ಲಿ ಹಾಯ್ದು ತನ್ನ ರೂಮು ಸೇರಿದಳು ಹೊಸದಾಗಿ ನಾಮಕರಣವಾದ ಸುರಭಿ. ಇದು ಇಲ್ಲಿಗೆ ನಿಲ್ಲೋದಲ್ಲ ಅಂತ ಗೊತ್ತಿತ್ತು. ರಾತ್ರಿ ಊಟದ ಸಮಯಕ್ಕೆ ಅಪ್ಪ, ಇಬ್ಬರು ಅಣ್ಣಂದಿರು ಸೇರಿದಾಗ ಸುಬ್ಬಿ ಎಷ್ಟರ ಮಟ್ಟಿಗೆ ಹಚ್ಚಿಕೊಂಡಿದ್ದಾಳೆ ಎಂಬ ಪ್ರಮಾಣವನ್ನು ಕೆಂಪಮ್ಮ ಅವರೆದುರಿಟ್ಟು ಒಂದು ಅಸಾಮಾನ್ಯ ಪ್ರತಿಕ್ರಿಯೆಗೆ ಕಾಯತೊಡಗಿದಳು.

ಚಂದ್ರಯ್ಯ ರಾಜಮ್ಮ, ರಮೇಶ, ಚಿದಾನಂದರಿಗೆ ಅಚ್ಚರಿಯೂ, ಸುಬ್ಬಿಗೆ ಇಷ್ಟೆಲ್ಲ ಕಾನೂನು ಜ್ಞಾನವಿರುವ ಬಗ್ಗೆ ಮೆಚ್ಚುಗೆಯೂ ಉಂಟಾಯಿತು. ಚಂದ್ರಯ್ಯ ಊಟಕ್ಕೆ ಕುಳಿತಾಗ ಕೇಳಿದ 'ಯಾಕೆ ಸುಬ್ಬೀ... ಹೆಸರು ಹಿಡಿದು ಯಾರಾದ್ರು ಚುಡಾಯಿಸ್ತಿದ್ರಾ ಹ್ಯಾಗೆ?' 'ಅಪ್ಪ... ಅದೇನಂತಾ ಚಂದ ಅಂತ ಆ ಹೆಸರಿಟ್ರಿ? ಬೆಕ್ಕು, ನಾಯಿಗೆಲ್ಲ ರೀಟಾ, ಚಾಂದನಿ ಅಂತ ಹೆಸರಿರ್ತದೆ. ಅದು ಹೋಗಲಿ, ನಮ್ಮನೆ ಕತ್ತೆಗಳಿಗೇ ಬಲಭೀಮ, ಪಾವನಿ ಅಂತ ಹೆಸರಿಟ್ಟಿದ್ರಿ ಆ